# ಕರ್ಮ–ಅಕರ್ಮ

ಪ್ರತಿಯೊಬ್ಬರ ಜೀವನದಲ್ಲಿ ಹಲವು ಬಾರಿ ಅನೇಕ ಸಂಶಯಗಳೂ ಸಂದೇಹಗಳೂ ಪ್ರಶ್ನೆಗಳೂ ಬರುವುದುಂಟು. ಇವು ಒಂದೊಂದು ಕಾಲದಲ್ಲಿ ಒಂದೊಂದು ಬಗೆಯಾಗಿ ತೋರಿಕೊಳ್ಳುತ್ತವೆ. ಸಣ್ಣ ವಯಸ್ಸಿನಲ್ಲಿ ಮನೆಯ ಹಿರಿಯರು 'ಇದು ಮಾಡು, ಇದು ಮಾಡಬೇಡ' ಎಂದು ಹೇಳುತ್ತಾರೆ. ಇನ್ನು ಕೆಲವರು 'ಇದು ಸರಿ, ಇದು ತಪ್ಪು' ಎಂದು ನಿರ್ಣಯ ಕೊಡುತ್ತಾರೆ. ಇಷ್ಟಾದರೂ ಸಂದೇಹಗಳು ಉಳಿದುಕೊಳ್ಳುತ್ತಲೇ ಇರುತ್ತವೆ. ಒಬ್ಬೊಬ್ಬರೂ ಸಂದೇಹಗಳನ್ನು ಪರಿಹರಿಸುವಾಗ ಕೆಲವು 'ಪ್ರಮಾಣಗಳನ್ನು' ಆಧರಿಸಿ ನೀಡುತ್ತಾರೆ. ಮತ್ತೂ ಕೆಲವರು ತಮ್ಮ ಜೀವನಾನುಭವದ ಮೂಲಕ ತಿಳಿಹೇಳುತ್ತಾರೆ. ಬಾಲಗಂಗಾಧರ ತಿಲಕರು ಗೀತೆಗೆ ವ್ಯಾಖ್ಯಾನ ಬರೆದಾದ ಮೇಲೆ 'ಕರ್ಮಯೋಗದ ರಹಸ್ಯ' ಎಂಬ ಉಪಶೀರ್ಷಿಕೆಯನ್ನು ನೀಡಿದ್ದರು. ಶಂಕರರು 'ಜ್ಞಾನವೇ' ಮುಖ್ಯತಮವೆಂದು ಸಾರಿದರು. ರಾಮಾನುಜರು ಮತ್ತು ಮಧ್ವರು 'ಭಕ್ತಿಯ' ಕಡೆ ವಾಲಿದರು. ಗೀತೆಯು ಜ್ಞಾನ–ಕರ್ಮ–ಭಕ್ತಿಗಳನ್ನು ಸಮನ್ವಯಗೊಳಿಸುತ್ತದೆಂದು ಇತರ ದಾರ್ಶನಿಕರು ಹೇಳಿದರು.

ಭಗವದ್ಗೀತೆಯ 'ಕರ್ಮಯೋಗದ ನಾಲ್ಕನೆಯ ಅಧ್ಯಾಯದಲ್ಲಿ ಕರ್ಮ–ಅಕರ್ಮಗಳ ವಿಚಾರ' ಬರುತ್ತದೆ. ಇವುಗಳಲ್ಲದೆ ನಾವು ಬಳಕೆಯಲ್ಲಿ ಸತ್ಕರ್ಮ–ದುಷ್ಕರ್ಮ ಎಂಬ ಮಾತುಗಳನ್ನು ಬಳಸುತ್ತೇವೆ. ಉತ್ತಮವಾದ ಕೆಲಸ ಯಾರು ಮಾಡುತ್ತಾರೋ ಅವರು ಸತ್ಕರ್ಮಶೀಲರು. ದುಷ್ಕರ್ಮರಾದವರು ಇದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಾರೆ. ಸಂಸ್ಕೃತದಲ್ಲಿ ಸ್ವಾರಸ್ಯಕರವಾದ ಮಾತೊಂದುಂಟು 'ಅಹಂ ಕರೋಮಿ' ಎಂಬುದೇ ಆ ಮಾತು. ಇದರಲ್ಲಿ 'ನಾನು' ಮಾಡುತ್ತೇನೆ ಎಂಬ ಸ್ವಾರ್ಥವಾಕ್ಯವುಂಟು. 'ಇದೆಲ್ಲಾ ನಾನೇ ಮಾಡಿದ್ದು, ಇದೆಲ್ಲಾ ನನ್ನದು' ಎಂಬ ಸ್ವಾರ್ಥದಲ್ಲಿ ವೈಯಕ್ತಿಕ ನೆಲೆಗಳುಂಟು. ಇದು 'ಕರ್ಮದ' ಸ್ವಾರ್ಥಪ್ರತ್ಯಯ.

ಗಾಂಧೀಜಿ ಅನೇಕ ಬಾರಿ 'ನಿಷ್ಕಾಮ' ಕರ್ಮದ ಬಗೆಗೆ ಮಾತನಾಡಿದ್ದಾರೆ. ಈಶ್ವರಾರ್ಪಿತ ಬುದ್ಧಿಯಿಂದ ಮಾಡುವುದೇ ನಿಜವಾದ ಕರ್ಮ. ಇದು ಗೀತೆಯು ಸಾರುವ ಕರ್ಮತತ್ತ್ವ. ಕುವೆಂಪು ಅವರು 'ಬೆರಳ್‌ಗೆ ಕೊರಳ್ ನಾಟಕದಲ್ಲಿ' ಕರ್ಮತತ್ವದ ಬಗೆಗೆ ಮಾತನಾಡಿದ್ದಾರೆ. ಅವರು ಮಹಾಭಾರತದ ಉಲ್ಲೇಖವನ್ನು ಮಾಡಿ 'ಕರ್ಮದ' ಪಾಂಗು ಮರಿಗೆ ಮರಿ ಎಂದಿದ್ದಾರೆ. ಸತ್ಕರ್ಮವು ಸದಾ ಸತ್ಫಲವನ್ನು ತಂದು ಕೊಡುತ್ತದೆ. ಈಗ ನಮ್ಮ ಸ್ವಾರ್ಥಪ್ರತ್ಯಯದಿಂದಾಗಿ ಸುತ್ತ–ಮುತ್ತಣ ಪರಿಸರವನ್ನು ಹಾಳು ಮಾಡಿದೆವು. ಬೇಕೋ ಬೇಡವೋ ಎಲ್ಲವೂ ತನಗೆ ಬೇಕೆಂದು ಹಂಬಲಿಸುತ್ತ ನಾವು ಹೊರಟೆವು. ನಮ್ಮ ಬದುಕಿನ ಮುಂದೆ ಕಸದ ರಾಶಿಯನ್ನೇ ಹರಡಿಕೊಂಡು ಕುಳಿತು ಬಿಟ್ಟೆವು. ಇವೆಲ್ಲವೂ ದುಷ್ಕರ್ಮದ ಫಲ. ವ್ಯಾವಹಾರಿಕ ಸತ್ತೆಯು ದುಷ್ಕರ್ಮದ ಮೂಲದ ನಮ್ಮನ್ನು ಎತ್ತೆತ್ತಲೋ ಒಯ್ಯುತ್ತಿರುತ್ತದೆ. ಆದರೆ, ಪಾರಮಾರ್ಥಿಕ ಸತ್ತೆಯು ಸತ್ಕರ್ಮದ ಮೂಲಕ ನಮ್ಮನ್ನು ಸರಿಯಾದ ಜಾಗಕ್ಕೆ ತಂದು ನಿಲ್ಲಿಸುತ್ತದೆ. 'ಮಾಡಿದುಣ್ಣೋ ಮಹರಾಯ' ಎಂಬ ಗಾದೆಯ ಹಿಂದೆ ದುಷ್ಕರ್ಮದ ಫಲವು ಅಡಗಿದೆ. ಆಯ್ಕೆ ನಮ್ಮದೇ ಆದರೂ ಸರಿಯಾದ ಹಾದಿಯನ್ನು ತುಳಿಯದೇ ಹೋದವರ ಪಾಡನ್ನು ನಾವು ಈಗಲೂ ಕಾಣುತ್ತಿದ್ದೇವೆ. ವಾಲ್ಮೀಕಿ ಪೂರ್ವದಲ್ಲಿ ದರೋಡೆಕೋರನಾಗಿದ್ದ. ಅವನು ಹೆಂಡತಿ–ಮಕ್ಕಳಿಗಾಗಿ ದರೋಡೆ ಮಾಡುವ ಪ್ರವೃತ್ತಿ ಹೊಂದಿದ್ದ. ಆದರೆ, ನಾರದ ಮಹರ್ಷಿಗಳ ಮೂಲಕ 'ಕರ್ಮಯೋಗ'ದ ಕಡೆ ಬಂದ. ಅವನು ಅಕರ್ಮದಿಂದ ಕರ್ಮದ ನೆಲೆಯನ್ನು ತಲುಪಿದ. ಬುದ್ಧನ ಜಾತಕಕತೆಯಲ್ಲಿ ಬರುವ 'ಅಂಗುಲಿಮಾಲನ ಕಥೆ'ಯನ್ನು ನೀವೊಮ್ಮೆ ನೆನಪಿಸಿಕೊಳ್ಳಿ. 'ಅಂಗುಲಿಮಾಲಾ' ದಾರಿಹೋಕರ ತಲೆಯನ್ನು ಕತ್ತರಿಸಿ ಅವರ ಬೆರಳುಗಳನ್ನು ಕೊರಳಿಗೆ ಮಾಲೆಯನ್ನಾಗಿ ಹಾಕಿಕೊಳ್ಳುತ್ತಿದ್ದ. ಬುದ್ಧನ ಕಾರುಣ್ಯವು ಅಕರ್ಮದಿಂದ ಕರ್ಮದ ಕಡೆಗೆ ಅವನನ್ನು ತಿರುಗಿಸಿತು.

ಇಲ್ಲೊಂದು ಪ್ರಶ್ನೆ. ನಮ್ಮಲ್ಲಿ ಅಕರ್ಮವನ್ನೊ ದುಷ್ಕರ್ಮವನ್ನೊ ಪ್ರೇರಿಸುವ ಶಕ್ತಿ ಯಾವುದು? ಈ ಪ್ರಶ್ನೆಯು ವೈಯಕ್ತಿಕ ನೆಲೆಯಲ್ಲೇ ಪರಿಭಾವಿಸಿಕೊಳ್ಳಬೇಕೆಂದು ತೋರುತ್ತದೆ. ಅದು ಸಂಸ್ಕಾರವನ್ನೂ ಅವಲಂಬಿಸಿರುತ್ತದೆ. ಸಂಸ್ಕಾರಕ್ಕೆ ಉಪಜನ್ಯಗಳಾದ ಮನೆಯ ಪರಿಸರ ಹಾಗೂ ಸಾಮಾಜಿಕ ವಾತಾವರಣಗಳೂ ಕಾರಣವಾಗಿರುತ್ತವೆ. ಒಂದಂತೂ ನಿಜ. ವ್ಯಾವಹಾರಿಕ ಸತ್ತೆಯಲ್ಲಿ ಮುಳುಗಿರುವವರಿಗೆ ಕರ್ಮ–ಅಕರ್ಮಗಳ ಸ್ವರೂಪ ನಿಚ್ಚಳವಾಗಿ ತಿಳಿಯಲು ಸಾಧ್ಯವಾಗುವುದಿಲ್ಲ. ಆದರೆ, ಅದನ್ನು ತಿಳಿಯಲು ಸಾಧನಸಾಮಗ್ರಿಯೊಂದು ಬೇಕಾಗುತ್ತದೆ. ಅದು ಇದೇ ಆಗಬೇಕೆಂದಿಲ್ಲ. ಗ್ರಂಥವೊ, ವ್ಯಕ್ತಿಯೊ, ಘಟನೆಯೊ, ಮಾತೊ, ನೋಟವೊ ಯಾವುದಾದರೂ ಆಗಬಹುದು. ಶ್ರೀಕೃಷ್ಣನು ಗೀತೆಯಲ್ಲಿ 'ಕರ್ಮಗಳ ಲೇಪವಿಲ್ಲ, ಕರ್ಮಗಳ ಆಸೆಯೂ ಇಲ್ಲ ಎಂದು ತಿಳಿದವನು ಕರ್ಮ ಬಂಧನಕ್ಕೆ ಒಳಗಾಗುವುದಿಲ್ಲ' ಎಂದು ಹೇಳಿದ್ದಾನೆ. ಅವನೇ ಮುಂದೆ 'ಯಾವುದು ಕರ್ಮ, ಯಾವುದು ಅಕರ್ಮ' ಎನ್ನುವ ವಿಷಯದಲ್ಲಿ ವಿದ್ವಾಂಸರೂ ಕೂಡ ಸಂಶಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಕರ್ಮವನ್ನು ನಿನಗೆ ಹೇಳುತ್ತೇನೆ. ಇದನ್ನು ತಿಳಿಯುವುದರಿಂದ ಅಶುಭಗಳಿಂದ ಬಿಡುಗಡೆಯಾಗುತ್ತದೆ (4.16) ಎಂದು ಹೇಳಿರುವುದನ್ನು ನಾವು ಈ ಹೊತ್ತು ಚಿಂತಿಸುವುದು ಸರಿಯೆಂದು ತೋರುತ್ತದೆ. ಕರ್ಮಗಳೆಂದರೆ ಶಾಸ್ತ್ರವಿಹಿತ ಕರ್ಮಗಳು; ವಿಕರ್ಮ ಅಥವ ಅಕರ್ಮಗಳೆಂದರೆ ಪ್ರತಿಷಿದ್ಧ ಕರ್ಮಗಳೆಂದು ಅರ್ಥ. ಶಂಕರರು 'ಮೂಢದೃಷ್ಟಿಯುಳ್ಳ ಜನರಿಗೆ ಅಕರ್ಮವೇ ಸತ್ಕರ್ಮವೆಂದು ತೋರುತ್ತದೆ. ಹಾಗೆಯೇ ಕರ್ಮ ಅಕರ್ಮದಂತೆ ಕಾಣುತ್ತದೆ' ಎಂದಿದ್ದಾರೆ. ಇದು ಗಮನೀಯ.

ನಮ್ಮ ಪ್ರತಿನಿತ್ಯದ ನಡಾವಳಿಯಲ್ಲಿ ಅಕರ್ಮದ ಪಾಲೇ ಹೆಚ್ಚಿದೆ. ನಾವು ದುಷ್ಕರ್ಮ ಅಥವ ಅಕರ್ಮದ ಬೆನ್ನನ್ನು ಸದಾ ಹತ್ತುತ್ತಿರುತ್ತೇವೆ. ಇದು ವ್ಯಾವಹಾರಿಕ ಸತ್ತೆಯ ಅಕರ್ಮಪ್ರಪಂಚ. ಇಂಥ ಪ್ರಪಂಚದ ನಡುವೆ ನಾವೀಗ ಬದುಕುತ್ತಿದ್ದೇವೆ. ಸತ್ಕರ್ಮ, ಸತ್‌ಕ್ರಿಯೆ, ಸದ್ಭಾವಗಳು ನಮ್ಮ ಲೌಕಿಕ ಬದುಕನ್ನು ಆನಂದಗೊಳಿಸಿ, ತನ್ಮೂಲಕ ಪಾರಮಾರ್ಥಿಕ ಸತ್ತೆಯ ಬೆಳಕಿಗೆ ಕಾರಣವಾಗುತ್ತವೆ. ಆದರೆ, ನಾವು ಭೂಮಿಯನ್ನು ನರಕಮಾಡಿಕೊಂಡಿದ್ದೇವೆ. ಇದು ಅಕರ್ಮದ ಫಲ. ಆದರೆ, ಭೂಮಿಯನ್ನು 'ಸ್ವರ್ಗವನ್ನಾಗಿಸಿಕೊಳ್ಳುವುದು ಯಾವಾಗ?' ಇದು ನಮ್ಮ ಸಂಸ್ಕೃತಿಯ ಮೂಲಗಾಮಿ ಪ್ರಶ್ನೆಯೂ ಹೌದು. 'ಅಹಂ ಕರೋಮಿತಿ ವೃಥಾಭಿಮಾನಃ' ಎಂಬ ಎಚ್ಚರ ನಮಗೆ ಸದಾ ಬೇಕಿದೆ. ಆಗ ನಾವು ಅಕರ್ಮದ ಕತ್ತಲಿನಿಂದ ಕರ್ಮದ ಬೆಳಕಿಗೆ ಹೋಗಲು ಸಾಧ್ಯವಾಗುತ್ತದೆ.

■ **ಪುರಂಜೀವಿ**

## ಮಾತೇ ಮುತ್ತು

- ನಿಮ್ಮಷ್ಟಕ್ಕೆ ನೀವೇ ಬೆಳೆಯಬೇಕು. ಅದಕ್ಕಾಗಿ ಬೇರೊಬ್ಬ ಶಿಕ್ಷಕನಿರುವುದಿಲ್ಲ.
  —ಸ್ವಾಮಿ ವಿವೇಕಾನಂದ
- ಸತ್ಯವನ್ನು ಹೇಳುವವನು, ಸ್ವಾರ್ಥವನ್ನು ಗೆದ್ದವನು ನಿಜವಾದ ಸುಖಿ.
  —ಬುದ್ಧ
- ದುಃಖದ ಮೌನಭಾಷೆಯೇ ಕಣ್ಣೀರು.
  —ವಾಲ್ಟೇರ್
- ಸುಖ, ಸ್ನೇಹಿತರನ್ನು ಕರೆತರುತ್ತದೆ. ಕಷ್ಟ ಅವರ ಅರ್ಹತೆಯನ್ನು ಪರೀಕ್ಷಿಸುತ್ತದೆ.
  —ಪಿ. ಸೈರಸ್
- ವಿವೇಕವೆಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.
  —ಗೋಪಾಲಕೃಷ್ಣ ಅಡಿಗ
- ಪ್ರೇಮವು ಪಾಪಿಯನ್ನು ಸುಧಾರಿಸುತ್ತದೆ.
  —ಟಾಲ್ ಸ್ಟಾಯ್
- ದುಃಖಕ್ಕೆ ಸಿಕ್ಕಷ್ಟು ಸುಖಕ್ಕೆ ಕಾರಣ ಬೇಗ ಸಿಗುವುದಿಲ್ಲ.
  —ಪಿ. ಲಂಕೇಶ್
- ತಾಳ್ಮೆ ಮತ್ತು ಸಮಯ ಇವೆರಡೂ ಶಕ್ತಿಶಾಲಿ ಯೋಧರು.
  —ಟಾಲ್‌ಸ್ಟಾಯ್